**SC No. 177/202 4**
**PW.-04**

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

**ಎಸ್. ಸಿ. 177/2024**

| | | |
|---|---|---|
| ಸಾಕ್ಷಿದಾರರ ಹೆಸರು | ಸುಭಾಶಿನಿ | ಪ್ರಮಾಣ ವಚನ ಮಾಡಿದ ದಿನಾಂಕ: 17.11.2025 |
| ತಂದೆಯ/ಗಂಡನ ಹೆಸರು | ಗಿರೀಶ್ ಕುಮಾರ್ | |
| ವಯಸ್ಸು | 26 ವರ್ಷ | |
| ವೃತ್ತಿ | ಗೃಹಿಣಿ | ಪ್ರಾ.ಸಾಃ 04 |
| ವಾಸ ಸ್ಥಳ | ಬೆಂಗಳೂರು | ಚಾ.ಸಾಃ 05 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು ಈಗ್ಗೆ ಒಂದು ವರ್ಷದಿಂದ ಬೆಂಗಳೂರಿನಲ್ಲಿ ವಾಸವಾಗಿರುತ್ತೇನೆ. ಅದಕ್ಕಿಂತ ಪೂರ್ವದಲ್ಲಿ ನಾನು ಮೈಸೂರಿನ ಎರಗನಹಳ್ಳಿಯ ಮನೆ ನಂಬರ್ 808 ರಲ್ಲಿ ವಾಸವಾಗಿದ್ದೆ. ಮನೆಯಲ್ಲಿ ನಾನು, ನನ್ನ ಗಂಡ ಮತ್ತು ಮಗಳು ವಾಸವಾಗಿದ್ದೆವು. ನನ್ನ ಗಂಡ ಮೈಸೂರಿನಲ್ಲಿ ಇದ್ದಾಗ ಎಲೆಕ್ಟ್ರಿಕ್ ಆಟೋ ನಡೆಸುತ್ತಿದ್ದರು. ಆಟೋ ನಂಬರ್ ಕೆಎ 55–3143 ಇರುತ್ತದೆ. ನಾನು ವಾಸವಾಗಿದ್ದ ಮನೆಯ ಮಾಲೀಕರ ಹೆಸರು ಚಲಯ್ಯ ವರದರಾಜು ಇದ್ದರು. ನನಗೆ ಮಂಜೇಶ್ ಎಂಬುವವರು ಗೊತ್ತು ಅವರು ನಮ್ಮ ಮನೆಯ ಪಕ್ಕದ ವಾಸಿ ಇದ್ದರು. ಅವರ ಮನೆಯಲ್ಲಿ ಮಂಜೇಶ್, ಅವರ ಹೆಂಡತಿ ರಶ್ಮಿ ಮತ್ತು ಸಾನ್ವಿ ದೊಡ್ಡ ಮಗಳು , ಜಾನ್ವಿ ಚಿಕ್ಕ ಮಗಳು ವಾಸವಾಗಿದ್ದರು. ನಾನು ಬಾಡಿಗೆ ಮನೆಯಲ್ಲಿ

ಇದ್ದಾಗ ಮಂಜೇಶ್ ರವರ ದೊಡ್ಡ ಮಗಳು ಶಾಲೆಗೆ ಹೋಗುತ್ತಿದ್ದಳು ನನ್ನ ಮಗಳು sunshine play home ಗೆ ಹೋಗುತ್ತಿದ್ದಳು ಅದೇ sunshine play home ಗೆ ಮಂಜೇಶ್ ರವರ 2 ನೇ ಮಗಳು ಜಾನ್ವಿ ಸಹ ಹೋಗುತ್ತಿದ್ದಳು. ನಾನು ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತನನ್ನು ನೋಡಿದ್ದೆನು.

ದಿನಾಂಕ 10.06.2024 ರಂದು ನಾನು ಮಧ್ಯಾಹ್ನ 1.30 ಸುಮಾರಿಗೆ ಬಟ್ಟೆ ಹಾಕುವ ಸಲುವಾಗಿ ಗಲ್ಲಿ ಒಳಗೆ ಹೋಗಿದ್ದೆ ಆಗ ಕಪ್ಪು ಬಣ್ಣದ ಸ್ಕೂಟಿಯಲ್ಲಿ ಆರೋಪಿ, ರಶ್ಮಿ ಮತ್ತು ಜಾನ್ವಿ ಬಂದಿದ್ದರು. ನಾನು ಬಟ್ಟೆ ಹಾಕಿ ಹೊರಗೆ ಬಂದಾಗ ಗೇಟಿನ ಹತ್ತಿರ ಜಾನ್ವಿ ನಿಂತಿದ್ದರು ನಾನು ಸ್ಕೂಲಿಗೆ ಹೋಗಿ ಬಂದ ಎಂದು ಕೇಳಿದೆ ಅದಕ್ಕೆ ರಶ್ಮಿ ಜಾನ್ವಿ ಶಾಲೆಗೆ ಹೋಗಿದ್ದಳು ಈಗ ಕರೆದುಕೊಂಡು ಬಂದೆ ಎಂದು ಹೇಳಿದರು ಆ ನಂತರ ನಾನು ಮನೆಯ ಒಳಗೆ ಹೋದೆ ಅವರು ಸಹ ಮನೆಯ ಒಳಗೆ ಹೋದರು. ಅದೇ ದಿನ ಸಂಜೆ 4.00 ಗಂಟೆ ಸುಮಾರಿಗೆ ಮಂಜೇಶ್ ರವರ ದೊಡ್ಡ ಮಗಳು ಸಾನ್ವಿ ನನ್ನ ಮನೆಯ ಕಿಟಕಿಯನ್ನು ಕುಟ್ಟಿ ನನಗೆ ಆಂಟಿ ಆಂಟಿ ಎಂದು ಕರೆದಿದ್ದಳು ಮತ್ತು ನನ್ನ ಅಮ್ಮ ಮಾತನಾಡುತ್ತಿಲ್ಲ ಬನ್ನಿ ಎಂದು ಹೇಳಿಳದಳು ಆಗ ನಾನು ಮತ್ತು ನನ್ನ ಗಂಡ ಮನೆಯಿಂದ ಹೊರಗಡೆ ಬಂದೆವು ಎದುರುಗಡೆ ಮನೆಯ ಪ್ರಸನ್ನ ರವರು ರಶ್ಮಿ ಅವರಿಗೆ ಏನೋ ಆಗಿದೆ ಇಲ್ಲಿಯೇ ಇರಿ ಆಕೆಯ ಗಂಡ ಬರುತ್ತಿದ್ದಾರೆ ಎಂದು ತಿಳಿಸಿದ್ದರು. ನಂತರ ಮಂಜೇಶ್ ಬಂದರು ಆ ನಂತರ ಅವರು ಮನೆಯ ಒಳಗಡೆ ಹೋದರು ನಾವು ಹೊರಗಡೆ ನಿಂತಿದ್ದೆವು

ಮಂಜೇಶ್ ಹೊರಗಡೆ ಬಂದು ರಶ್ಮಿ ಮಾತನಾಡುತ್ತಿಲ್ಲ ಎಂದು ತಿಳಿಸಿದರು ನಮ್ಮ ಮನೆಯವರ ಆಟೋದಲ್ಲಿ ಕಾವೇರಿ ಆಸ್ಪತ್ರೆಗೆ ರಶ್ಮಿಯನ್ನು ಕರೆದುಕೊಂಡು ಹೋಗಿದ್ದರು. ಸಂಜೆ 6.00 ಗಂಟೆ ಸುಮಾರಿಗೆ ನನ್ನ ಗಂಡ ಮನೆಗೆ ಬಂದು ರಶ್ಮಿ ಮರಣಹೊಂದಿರುತ್ತಾರೆ ಎಂದು ನನಗೆ ತಿಳಿಸಿದ್ದರು. ಅಕ್ಕಪಕ್ಕದವರು ಹೇಳಿದ ಪ್ರಕಾರ ರಶ್ಮಿಗೆ ಕರೆಂಟ್ ಶಾಕ್ ಆಗಿ ಮರಣ ಹೊಂದಿರುತ್ತಾರೆ ಎಂದು ನನಗೆ ಗೊತ್ತಾಗಿತ್ತು. ಆ ನಂತರ ಯಾರು ಸಾಯಿಸಿಬಿಟ್ಟರು ಎಂದು ಗೊತ್ತಾಯಿತು. ಆ ದಿನ ಗಾಡಿಯಲ್ಲಿ ರಶ್ಮಿಯ ಜೊತೆ ಬಂದಿದ್ದ ರಾಮ್ ಕುಮಾರ್ ಅವರೇ ಏನಾದರು ಮಾಡಿರಬಹುದು ಎಂದು ಗೊತ್ತಾಯಿತು. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ತೆಗೆದುಕೊಂಡಿರುತ್ತಾರೆ.

**ಈ ಹಂತದಲ್ಲಿ , ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ಮಂಜೇಶ್ ಮರದ ಕೆಲಸ ಮಾಡಿಕೊಂಡಿದ್ದರು ಎಂದರೆ ಸರಿ. ರಶ್ಮಿ ಯ ಮನೆಗೆ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ಆಗಾಗ ಬಂದು ಹೋಗುತ್ತಿದ್ದ ಎಂದರೆ ಸರಿ. ರಶ್ಮಿ ನನ್ನ ಜೊತೆ ಮಾತನಾಡುತ್ತಿದ್ದ ಎಂದರೆ ಸರಿ. ರಶ್ಮಿ ನನ್ನ ಜೊತೆ ಮಾತನಾಡುವಾಗ ಆರೋಪಿತ ಬೀರಿಹುಂಡಿ ಗ್ರಾಮದವರು ಇದ್ದು ನನ್ನ ಸ್ನೇಹಿತ ಇರುತ್ತಾನೆ

ನನ್ನ ಗಂಡನಿಗೂ ಸಹ ಪರಿಚಯ ಮಾಡಿಸಿದ್ದೇನೆ ಎಂದು ಹೇಳಿರುತ್ತಾಳೆ ಎಂದರೆ ಸರಿ. ರಶ್ಮಿ ಆರೋಪಿತನ ಸ್ಕೂಟಿಯಲ್ಲಿ ಹೊರಗೆ ಹೋಗಿ ಓಡಾಡುತ್ತಿದ್ದಳು ಎಂದರೆ ಸರಿ. ಆ ದಿನ ಸ್ಕೂಟಿ ನಂಬರ್ ಕೆಎ–09–2817 ರ ಸ್ಕೂಟಿಯಲ್ಲಿ ಬಂದಿದ್ದರು ಎಂದರೆ ಸರಿ ಆದರೆ ನಾನು ಆ ದಿವಸ ನಂಬರ್ ಗಮನಿಸಿರುವುದಿಲ್ಲ ಆದರೆ ಸ್ಕೂಟಿ ಕಪ್ಪು ಬಣ್ಣದ್ದು ಇತ್ತು. ನಾನು ಜಾನ್ವಿಯನ್ನು ಸ್ಕೂಲಿಗೆ ಹೋಗಿದ್ಯಾ ಎಂದು ಮಾತನಾಡಿಸಿದಾಗ ರಶ್ಮಿ ನನ್ನೊಂದಿಗೆ ಮಾತನಾಡಿ ಜಾನ್ವಿ ಯನ್ನು ಕರೆದುಕೊಂಡು ಒಳಗೆ ಹೋದಾಗ ಆರೋಪಿತನು ಅವಳೊಂದಿಗೆ ಮನೆ ಒಳಗಡೆ ಹೋಗಿದ್ದ ಎಂದರೆ ಸರಿ. ನನ್ನ ಗಂಡ ಮನೆಗೆ 6.30 ಗಂಟೆಗೆ ವಾಪಸ್ಸು ಬಂದು ರಶ್ಮಿ ಮೃತಪಟ್ಟಿರುವ ವಿಚಾರವನ್ನು ಹೇಳಿದಾಗ ನಾನು ಆಗ ಮಧ್ಯಾಹ್ನ ರಶ್ಮಿ ಯವರು ಜಾನ್ವಿಯೊಂದಿಗೆ ಕಪ್ಪು ಬಣ್ಣದ ಜರ್ಕಿನ್ ಹಾಕಿದ್ದ ಆಗಾಗ ರಶ್ಮಿ ಮನೆಗೆ ಬರುವ ರಾಮ್ ಕುಮಾರ್ ನೊಂದಿಗೆ ಸ್ಕೂಟಿಯಲ್ಲಿ ಬಂದಿದ್ದು ಅವನು ರಶ್ಮಿಯವರ ಮನೆಗೆ ಹೇಗಿರುತ್ತಾನೆ ಅದೇ ಕೊನೆಯ ಬಾರಿಗೆ ನಾನು ರಶ್ಮಿಯನ್ನು ನೋಡಿರುತ್ತೇನೆ ಎಂದು ಹೇಳಿದ್ದೇನೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದ :**

ನನ್ನ ಮಗಳ ಹೆಸರ ಗಿಯಾನ. ನನ್ನ ಮಗಳು sunshine play home ಗೆ ಹೋಗುತ್ತಿದ್ದಳು. ನನ್ನ ಮಗಳಿಗೆ 4.5 ವರ್ಷ ಆಗಿತ್ತು. ಪ್ಲೇ ಹೋಂ ಅನ್ನು ಮಧ್ಯಾಹ್ನ 1.00 ಗಂಟೆಗೆ ಬಿಡುತ್ತಿದ್ದರು. ನನ್ನ ಮಗಳನ್ನು ಕರೆದುಕೊಂಡು ಬರಲು ನಾನು ಹೋಗುತ್ತಿದ್ದೆ. ನನ್ನ ಮಗಳು ಹೋಗುತ್ತಿದ್ದ ಪ್ಲೇಹೋಂ ನಮ್ಮ ಮನೆಯಿಂದ 10 ನಿಮಿಷದ ಹಾದಿ ಇತ್ತು. ಆ

ದಿನ ನನ್ನ ಮಗಳನ್ನು ಪ್ಲೇಹೋಂಗೆ ಕಳುಹಿಸಿರಲಿಲ್ಲ ಊರಿಗೆ ಹೋಗಿ ಬಂದಿದ್ದೆವು. ನಮ್ಮ ಮನೆಯ ಬಾಗಿಲಿನ ಮುಂದಿನಿಂದ ಹೋದರೆ ರಶ್ಮಿಯ ಮನೆಗೆ ಸುಮಾರು 10 ಅಡಿ ಆಗುತ್ತದೆ ಎಂದರೆ ಆಗಬಹುದು. ನಮ್ಮ ಮನೆಯ ಮುಂಭಾಗದಲ್ಲಿ ಪ್ರಸನ್ನ ರವರ ಮನೆ ನಮ್ಮ ಮನೆಯ ಹಿಂಭಾಗಕ್ಕೆ ರಶ್ಮಿಯ ಮನೆ ಇದ್ದು ನಮ್ಮ ಮನೆಯ ಅಕ್ಕಪಕ್ಕದಲ್ಲಿ ಬೇರೆ ಮನೆ ಇರುತ್ತವೆ. 2023 ನೇ ಇಸವಿ ಆಗಸ್ಟ್ ತಿಂಗಳಿನಲ್ಲಿ ನಾವು ಇದ್ದಂತಹ ಮನೆಗೆ ಬಾಡಿಗೆಗೆ ಹೋಗಿದ್ದೆವು. ನಾನು ಮತ್ತು ರಶ್ಮಿ ಒಬ್ಬರಿಗೊಬ್ಬರು ಮಾತನಾಡಿಸಿಕೊಂಡು ಚೆನ್ನಾಗಿ ಇದ್ದೆವು. ರಶ್ಮಿಯವರ ಮನೆಯಿಂದ ಜೋರಾಗಿ ಕರೆದರೆ ನಮಗೆ ಕೇಳಿಸುತ್ತದೆ ಎಂದರೆ ಸರಿಯಲ್ಲ. ಮನೆಯ ಬೀದಿಯಲ್ಲಿ ಜೋರಾಗಿ ಕಿರುಚಿಕೊಂಡರೆ ಟಿವಿಯ ಶಬ್ದ ಇಲ್ಲದೇ ಇದ್ದರೆ ಕೇಳಿಸುತ್ತದೆ ಟಿವಿ ಶಬ್ದ ಇಲ್ಲದಿದ್ದರೆ ಕೇಳಿಸುವುದಿಲ್ಲ. ನನಗೆ ರಶ್ಮಿಯ ತಾಯಿ ಪರಿಚಯ ಇರುತ್ತದೆ ಮಾತನಾಡಿದ್ದೇನೆ. ನಾನು ರಶ್ಮಿಯ ತಮ್ಮನನ್ನು ನೋಡಿದ್ದೇನೆ ಪರಿಚಯ ಇರುವುದಿಲ್ಲ. ನಾನು ಪೊಲೀಸರ ಮುಂದೆ ಆ ದಿನ ಕಪ್ಪು ಬಣ್ಣದ ಸ್ಕೂಟಿಯಲ್ಲಿ ಬಂದಿರುತ್ತಾನೆ ಎಂದು ಹೇಳಿದ್ದೇನೆ. ನಾನು ಪೊಲೀಸರ ಮುಂದೆ ಆ ದಿನ ಯಾವ ಬಣ್ಣದ ವಾಹನದಲ್ಲಿ ಮತ್ತು ಯಾವ ನಂಬರ್ ವಾಹನದಲ್ಲಿ ಬಂದರು ಎಂದು ಹೇಳಿರುವುದಿಲ್ಲ ಎಂದರೆ ಸರಿ. ಆ ದಿನ ನೋಡಿಕೊಂಡು ಬಂದವರು ಹೊರಗಡೆ ರಶ್ಮಿಗೆ ಕರೆಂಟ್ ಶಾಕ್ ಹೊಡೆದಿರುತ್ತದೆ ಎಂದು ಮಾತನಾಡುತ್ತಿದ್ದರಿಂದ ನನಗೆ ಗೊತ್ತಾಯಿತು. ನಾನು ರಶ್ಮಿಯನ್ನು ಮುಟ್ಟಿ ನೋಡುವುದನ್ನಾಗಲೀ ಅಥವಾ ಉಸಿರಾಟ ಮಾಡುತ್ತಿದ್ದನ್ನಾಗಲಿ

ನೋಡಿರುವುದಿಲ್ಲ. ಮಧ್ಯಾಹ್ನ 1.30 ನಂತರ ರಶ್ಮಿಯ ಮನೆಗೆ ಯಾರು ಬಂದಿದ್ದರು ಯಾರು ಹೋದರು ಎಂದು ನೋಡಿರಲಿಲ್ಲ. 4.00 ಗಂಟೆ ನಂತರ ಅರ್ಧ ಗಂಟೆ ಒಳಗಡೆಯಲ್ಲಿಯೇ ರಶ್ಮಿಯನ್ನು ಕಾವೇರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ನೊಟೀಸ್ ಬಂದ ಮೇಲೆ ರಶ್ಮಿಯ ಮನೆಯವರು ರಶ್ಮಿಯ ಸಾವಿಗೆ ರಾಮ್ ಕುಮಾರ್ ಕಾರಣ ಎಂದು ಹೇಳಿದ್ದರು. ನಾನುಇದೇ ಮೊದಲ ಬಾರಿಗೆ ನ್ಯಾಯಾಲಯದ ಮುಂದೆ ಹಾಜರು ಇರುವ ಆರೋಪಿತನನ್ನು ನೋಡಿದ್ದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಿನ ರಶ್ಮಿಯ ತಾಯಿ ಮತ್ತು ಗಂಡ ನ್ಯಾಯಾಲಯಕ್ಕೆ ಬಂದಿದ್ದು ಅವರು ಹೇಳಿ ಕೊಟ್ಟ ಮೇರೆಗೆ ನ್ಯಾಯಾಲಯದಲ್ಲಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮೈಸೂರು.**